# ಸುಪಾರಿ ಪಡೆದ ಯೋಗಿ

'ಪಟ್ರೆ ಲವ್ಸ್ ಪದ್ಮ' ಚಿತ್ರದ ನಿರ್ದೇಶಕ ಚಂದ್ರಶೇಖರ್ ಶ್ರೀವಾಸ್ತವ ಎರಡೂವರೆ ವರ್ಷಗಳ ನಂತರ ಮತ್ತೊಂದು ಸಿನಿಮಾ ನಿರ್ದೇಶಿಸುತ್ತಿದ್ದಾರೆ. ಚಿತ್ರದ ಹೆಸರು 'ಕಾಲಾಯ ತಸ್ಮೈ ನಮಃ'.

ಕೊಲೆಗಡುಕನ ಸುತ್ತ ಸುತ್ತುವ ಕಥೆಯನ್ನು ಶ್ರೀವಾಸ್ತವ ಹೆಣೆದಿದ್ದಾರಂತೆ. 'ಈ ಚಿತ್ರದ ಕಥೆಯನ್ನು ಒಂದು ಸಾಲಿನಲ್ಲಿ ಬಣ್ಣಿಸಲಾರೆ. ಈ ಕಥೆಗೆ ಅನೇಕ ಆಯಾಮಗಳಿವೆ. ನನ್ನನ್ನು ವಿಚಲಿತಗೊಳಿಸಿದ ಕಥೆಯಿದು' ಎಂದು ನಿರ್ದೇಶಕರು ಹೇಳಿಕೊಂಡರು. ಅಂದಹಾಗೆ, ಮೊದಲ ಚಿತ್ರದ ಸೋಲುಗಳಿಂದ ಅವರು ಹಲವು ಪಾಠ ಕಲಿತಿದ್ದಾರಂತೆ.

ಲೂಸ್ ಮಾದ ಖ್ಯಾತಿಯ ಯೋಗಿ ಸುಪಾರಿ ಹಂತಕನಾಗಿ ನಟಿಸುತ್ತಿದ್ದಾರೆ. ನಿರ್ದೇಶಕರು ಕಥೆ ಹೇಳಿದಾಗ, ಆ ಕಥೆಯ ತಿರುವುಗಳಲ್ಲಿ ಯೋಗಿ ಕಳೆದೇಹೋದರಂತೆ. ಅಷ್ಟರಮಟ್ಟಿಗೆ ಕಥೆ ಅವರನ್ನು ಮರುಳು ಮಾಡಿದೆ. ನಾಯಕಿ ಮಧುಬಾಲಾ ಚಿತ್ರರಂಗಕ್ಕೆ ಹೊಸ ಹುಡುಗಿ. ಎರಡನೇ ಪಿಯುಸಿಯಲ್ಲಿ ಓದುತ್ತಿರುವ ಈ ಹುಡುಗಿ, ಅಪ್ಪಅಮ್ಮನ ಮಾತು ಮೀರದ ಮಗಳ ಪಾತ್ರದಲ್ಲಿ ನಟಿಸುತ್ತಿದ್ದಾಳಂತೆ.



# ಪುನೀತ್‌ರಿಂದ 'ಪುನೀತ್'

ಚಿತ್ರದ ಹೆಸರು ಪುನೀತ್. ಸಿನಿಮಾದ ಹೆಸರು ಕೇಳಿ ಇದು ನಾಯಕ ನಟ ಪುನೀತ್ ರಾಜಕುಮಾರ್ ನಟನೆಯ ಹೊಸ ಚಿತ್ರ ಎಂದು ಕಲ್ಪಿಸಿಕೊಳ್ಳುವಂತಿಲ್ಲ. ಪುನೀತ್‌ರ ಕಟ್ಟಾ ಅಭಿಮಾನಿಯಾದ ನೀಲ್ ಕಮಲ್ ತಮ್ಮ ನಿರ್ದೇಶನದ ಚಿತ್ರಕ್ಕೆ 'ಪುನೀತ್' ಎಂದೇ ಹೆಸರಿಟ್ಟಿದ್ದಾರೆ. ಚಿತ್ರಶೀರ್ಷಿಕೆಗೆ ತಮ್ಮ ಹೆಸರು ಬಳಸಿಕೊಳ್ಳಲು ಪುನೀತ್ ಸಂತೋಷದಿಂದ ಒಪ್ಪಿಕೊಂಡಿದ್ದಾರಂತೆ. ಕಳೆದ ವಾರ ನಡೆದ ಚಿತ್ರದ ಧ್ವನಿಮುದ್ರಿಕೆಯನ್ನು ಸ್ವತಃ ಪುನೀತ್ ರಾಜಕುಮಾರ್ ಅನಾವರಣಗೊಳಿಸಿದ್ದು ವಿಶೇಷ.

ಗೋಪಿಕಾಪ್ರಿಯ ಶ್ರೀಕೃಷ್ಣನ ಬಗ್ಗೆ ನೀಲ್ ಕಮಲ್‌ಗೆ ಒಂದು ರೀತಿಯ ಸೆಳೆತ. ಆ ಕಾರಣದಿಂದಲೇ ಅವರು ತಮ್ಮ ಮೊದಲ ಚಿತ್ರಕ್ಕೆ ಪ್ರೇಮಕಥೆಯನ್ನು ಆರಿಸಿಕೊಂಡಿದ್ದಾರೆ. ಈ ಪ್ರೇಮಕಥೆಯ ಜೊತೆಗೆ ವಿಧಿ ಲಿಖಿತದ ಬಗ್ಗೆಯೂ ಚಿತ್ರದಲ್ಲಿ ಪ್ರಸ್ತಾಪ ಇದೆಯಂತೆ.

ಧ್ವನಿಮುದ್ರಿಕೆ ಬಿಡುಗಡೆ ಮಾಡಿದ ಪುನೀತ್ ಚಿತ್ರಕ್ಕೆ ಶುಭಕೋರಿದರು. ನಟಿ ನೀತು ಕೂಡ ಕಾರ್ಯಕ್ರಮದಲ್ಲಿ ಹಾಜರಿದ್ದರು. ದಿಲೀಪ್ ಪೈ ಮತ್ತು ನಿಶಾ ಶೆಟ್ಟಿ ಪ್ರಮುಖ ಭೂಮಿಕೆಯಲ್ಲಿರುವ ಈ ಚಿತ್ರದಲ್ಲಿ ನಟಿ ಭವ್ಯ ನಾಯಕನ ತಾಯಿಯಾಗಿ ನಟಿಸಿದ್ದಾರೆ. ಮುಂಬಯಿಯ ಕಬೀರ್‌ಲಾಲ್ ಚಿತ್ರಕ್ಕೆ ಸಂಗೀತ ನೀಡಿದ್ದಾರೆ.



# ಜೋಗಯ್ಯ ಜ್ವರ

ಶಿವರಾಜ್‌ಕುಮಾರ್ ನಟನೆಯ ನೂರನೇ ಚಿತ್ರ 'ಜೋಗಯ್ಯ' ಈ ಮೊದಲು ನಿಗದಿಗೊಂಡಂತೆ 'ವರ ಮಹಾಲಕ್ಷ್ಮಿ' ಹಬ್ಬಕ್ಕೆ ತೆರೆ ಕಾಣುತ್ತಿಲ್ಲ. ಆದರೆ, ಆಗಸ್ಟ್‌ನಲ್ಲೇ ತೆರೆ ಕಾಣಿಸಲು ಪ್ರೇಮ್ ಎಲ್ಲ ಸಿದ್ಧತೆ ನಡೆಸುತ್ತಿದ್ದಾರೆ. ಸಿನಿಮಾ ಬಿಡುಗಡೆಯ ದಿನಗಣನೆ ಆರಂಭವಾಗುತ್ತಿರುವಂತೆ ಚಿತ್ರದ ಬಗೆಗಿನ ನಿರೀಕ್ಷೆಗಳನ್ನು ಜ್ವರದಂತೆ ಹೆಚ್ಚಿಸುವ 'ಪ್ರೇಮ್ ವರಸೆ'ಯೂ ಆರಂಭವಾಗಿದೆ. ಒಂದೆರಡು ಸ್ಯಾಂಪಲ್ ನೋಡಿ:

ಥ್ರೀಡಿ, ಗ್ರಾಫಿಕ್ಸ್ ಸೇರಿದಂತೆ ಅತ್ಯಾಧುನಿಕ ತಂತ್ರಜ್ಞಾನದಿಂದ 'ಜೋಗಯ್ಯ' ಸಿಂಗರಗೊಂಡಿದ್ದಾನೆ. ರಾಜ್ಯದಾದ್ಯಂತ ಇನ್ನೂರೈವತ್ತಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ; ಮೆಜೆಸ್ಟಿಕ್‌ನಲ್ಲಿ ಎರಡು ಚಿತ್ರಮಂದಿರ ಸೇರಿದಂತೆ ಬೆಂಗಳೂರು ನಗರದ ಸುತ್ತಮುತ್ತಲಿನ 60 ಚಿತ್ರಮಂದಿರಗಳಲ್ಲಿ ಸಿನಿಮಾ ಪ್ರದರ್ಶನಗೊಳ್ಳಲಿದೆ. ಪ್ರತಿ ಜಿಲ್ಲಾ ಕೇಂದ್ರದಲ್ಲಿ ಕನಿಷ್ಠ ಎರಡು ಥಿಯೇಟರ್‌ನಲ್ಲಾದರೂ 'ಜೋಗಯ್ಯ' ಅಬ್ಬರಿಸಲಿದ್ದಾನೆ.

■ ರಘು

